ನೋಡಿದ. “ನಾನ್ರೀ ಫಕೀರ” ಎಂದ.

“ಫಕೀರ, ಫಕೀರ” ಆಶ್ಚರ್ಯದಿಂದ ಅವನು ಇವನನ್ನು ನೋಡುತ್ತ “ಇಲ್ಲಿಗ್ಯಾಕೋ ಬಂದಿ? ಹ್ಯಾಂಗೊ ಬಂದಿ?”

“ಈ ಪೆಟ್ಟಿಗಿ ನಿಮಗ ಕೊಡಾಕ ಹೇಳ್ಯಾರಿ. ಮತ್ತ ನೀವ ನನಗ ಹೇಳಿಕಳಿಸಿರಂತಲ್ಲ, ಅದಕ್ಕ ಬಂದ್ನಿರಿ.”

“ಇಲ್ಲೆ, ಈ ಕುರ್ಚಿ ಮ್ಯಾಗ ಕೂಡು. ಏನೇನಾನು ಹೇಳು” ಎಂದು ಸುರೇಶಣ್ಣ ಹೇಳಿದ ಮೇಲೆ ಉಳಿದವರು ತಮ್ಮ ಇಸ್ಪೀಟಿನ ಎಲೆಗಳನ್ನು ಕೆಳಗಿಟ್ಟು ಫಕೀರನನ್ನು ನೋಡತೊಡಗಿದರು.

“ಇವ ಯಾವ ಪಾರ್ಟಿಯವ?” ಒಬ್ಬ ಕೇಳಿದ.

“ಇವನು ಯಾವ ಪಾರ್ಟಿಯವನೂ ಅಲ್ಲ. ಇವ ನಮ್ಮ ಹಳ್ಳಿಯವ. ಇವನಿಗೆ ಮೋಸ ಮಾಡಿ ಇಲ್ಲಿ ಕರ್ಕೊಂಡು ಬಂದಾರ. ಏನೇನಾತು ಹೇಳು ಫಕೀರ” ಎಂದು ಸುರೇಶಣ್ಣ ಕೇಳಿದ ಮೇಲೆ ಫಕೀರ ನಡೆದ ವಿಷಯವನ್ನು ಸಾದ್ಯಂತವಾಗಿ ಹೇಳಿದ. ಕೊನೆಗೆ ಹೇಳಿದ “ಈ ಪೆಟಿಗಿ ನಿಮಗ ಕೊಟ್ಟು ನಿಮ್ಮನ್ನು ಹೊರಗ ಕರಕೊಂಡು ಬರಾಕ ಹೇಳ್ಯಾರ್ರಿ.” ಎಲ್ಲರೂ ಸೂಟ್‌ಕೇಸ್ ಕಡೆ ನೋಡಿದರು. ಸಾಕಷ್ಟು ದೊಡ್ಡದಿತ್ತು.

“ಆ ಪೆಟಗಿ ಇಲ್ಲೇ ಇರ್ಲಿ. ನೀನು ಊರಿಗೆ ಹೊರಡು. ನಾನು ನಿನ್ನ ಜೋಡಿ ಒಬ್ಬನ್ನ ಕಳಿಸ್ತೀನಿ. ಅವ ನಿನ್ನ ಹುಬ್ಬಳ್ಳಿ ಬಸ್ ಹತ್ತಸ್ತಾನ. ಅಲ್ಲಿಂದ ಊರಿಗೆ ಹೋಗು. ಬ್ಯಾರೆ ಬಾಗಲದಿಂದ ಕರಕೊಂಡು ಹೋಕ್ಕಾರ. ನೀ ಅವರನ್ನು ಭೆಟ್ಟಿಯಾಗೋದು ಬ್ಯಾಡಾ. ಇನ್ನೊಮ್ಮೆ ಯಾರರ ಬಂದು ಕರದ್ರ ಬರಬ್ಯಾಡಾ. ಇಕಾ, ಇಲ್ಲಿ ತಗೊ. ಇದು ದೊಡ್ಡ ಪರ್ಸ್ ಐತಿ. ಇದರಾಗ ಸಾಕಷ್ಟು ರೊಕ್ಕ ಅದಾವ.”

“ಮತ್ತ ನೀವು ಇಲ್ಯಾಕ ಬಂದು ಕುಂತೀರಿ? ಅವರೆಲ್ಲಾ ಯಾರು, ಏನು ಕತಿ?”

“ಅದೆಲ್ಲಾ ನಿನಗ ತಿಳಿಯೂದಿಲ್ಲ. ಸುಮ್ಮಕ ಊರಿಗೆ ಹೋಗು.”

“ಅವರು ನಮ್ಮ ಹಳ್ಳಿಗೇ ಬಂದು ಹೊಡೆಯೋದು ಬಡಿಯೋದು ಮಾಡತಾರೇನ್ರಿ?”

“ಅವರು ಬರೋದಿಲ್ಲ. ಪೊಲೀಸರು ನಿನ್ನನ್ನ ನೋಡ್ಕೊತಾರ. ಇಲ್ಲೆ ಏನೇನಾತೂಂತ ಯಾರಿಗೂ ಹೇಳಬ್ಯಾಡ.”

ಸುರೇಶಣ್ಣ ಯಾರಿಗೋ ಫೋನ್ ಮಾಡಿ ಯಾವುದೋ ಭಾಷೆಯಲ್ಲಿ ಮಾತನಾಡಿದ. ಸ್ವಲ್ಪ ಸಮಯದ ನಂತರ ಪೂರ್ತಿ ಬಿಳಿ ಬಟ್ಟೆ ಧರಿಸಿದ ಎತ್ತರದ ವ್ಯಕ್ತಿ ಬಂದ. “ಇವನ ಜೋಡಿ ಹೋಗು. ಇವ ನಿನಗ ಹುಬ್ಬಳ್ಳಿ ಬಸ್ ಹತ್ಸಿ ಟಿಕೆಟ್ ತೆಗೆಸಿ ಕೊಡ್ತಾನ, ಆಮ್ಯಾಗ ನಾನ ಹಳ್ಳಿಕಡೆ ಬರ್ತೀನಿ. ಪರ್ಸ್ ತಗೊ, ಹೋಗಿ ಬಾ, ನಡಿ.”

ಫಕೀರ ಹೆದರುತ್ತ ಅವನೊಡನೆ ಹೊರಟ. ತನ್ನ ಬಟ್ಟೆ ಗಂಟು ಇಲ್ಲದ್ದಕ್ಕೆ ಕೈ ಭಣಭಣ ಎನಿಸುತ್ತಿತ್ತು. ರಾತ್ರಿಯಿಡೀ ಪಯಣ. ತೂಕಡಿಕೆ, ನಿದ್ದೆ. ಏನೇನೋ ಕನಸುಗಳು. ಬಗೆ ಹರಿಯಲಾರದ ಪ್ರಶ್ನೆಗಳು.


## ಮಾಧವ ಕುಲಕರ್ಣಿ

ಕತೆಗಾರ ಮತ್ತು ವಿಮರ್ಶಕ. ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವೀಧರ. ಅಧ್ಯಾಪಕ ವೃತ್ತಿಯಿಂದ ನಿವೃತ್ತರು. ಪತ್ರಿಕೆಗಳಲ್ಲಿ ಕತೆಗಳು ಮತ್ತು ಸಾಹಿತ್ಯ ಪತ್ರಿಕೆಗಳಲ್ಲಿ ಸಾಹಿತ್ಯ ವಿಮರ್ಶೆ ಪ್ರಕಟವಾಗಿವೆ. ಸಮಗ್ರ ಕತೆಗಳು ‘ಕಥಾಸಾಗರ’ ಎರಡು ಸಂಪುಟಗಳಲ್ಲಿ ಮತ್ತು ಸಮಗ್ರ ವಿಮರ್ಶೆ ‘ಹೊಳೆ’ ಮೂರು ಸಂಪುಟಗಳಲ್ಲಿ ಪ್ರಕಟವಾಗಿವೆ.